18	ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು	ನಂ.7, ಸಪ್ತಸಚಿವರ ವಸತಿಗೃಹ, ಸ್ಯಾಂಕಿ ರಸ್ತೆ	23.12
ಒಟ್ಟು			**586.63**

ರೈತರ ಸಾಲಕ್ಕೆ ಸ್ಟಾಂಪ್ ಶುಲ್ಕ ರದ್ದು

545 (752) ಶ್ರೀ ರಾಮಲಿಂಗಾ ರೆಡ್ಡಿ (ಬಿ.ಟಿ.ಎಂ. ಲೇಔಟ್) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 2009–10ರಲ್ಲಿ ಎಷ್ಟು ರೈತರಿಗೆ ಸಹಕಾರ ಸಂಘಗಳ ಬ್ಯಾಂಕು, ಡಿ.ಸಿ.ಸಿ. ಬ್ಯಾಂಕು ಇತ್ಯಾದಿಗಳ ಮೂಲಕ ಸಾಲ ನೀಡಲಾಗಿದೆ?

ಆ) ಈ ಸಾಲದ ಅಂದಾಜು ಮೊತ್ತವೆಷ್ಟು?

ಇ) ರೈತರು ತೆಗೆದುಕೊಳ್ಳುವ ಸಾಲಕ್ಕೆ ಸಂಬಂಧಪಟ್ಟಂತೆ ಶೇಕಡಾ ಎಷ್ಟು ಸ್ಟಾಂಪ್ ಶುಲ್ಕ ಪಾವತಿಸಬೇಕಾಗಿದೆ?

ಈ) ಈ ಸ್ಟಾಂಪ್ ಶುಲ್ಕವನ್ನು ರದ್ದುಗೊಳಿಸಲು ಸರ್ಕಾರ ನಿರ್ಧರಿಸಿದೆಯೇ?

ಶ್ರೀ ಲಕ್ಷ್ಮಣ.ಸವದಿ (ಸಹಕಾರ ಸಚಿವರು) :

ಅ) ರಾಜ್ಯದಲ್ಲಿ 2009–10ನೇ ಸಾಲಿನಲ್ಲಿ ಅಂದರೆ ದಿನಾಂಕ: 01.04.2009 ರಿಂದ 28.02.2010 ರವರೆಗೆ 10,96,086 ಜನ ರೈತರಿಗೆ ಕೃಷಿ ಪತ್ತಿನ ಸಹಕಾರ ಸಂಘಗಳ ಮತ್ತು ಡಿಸಿಸಿ ಬ್ಯಾಂಕುಗಳ ಮೂಲಕ ಕೃಷಿ ಸಾಲ ವಿತರಿಸಲಾಗಿದೆ.

ಆ) 2009–10 ನೇ ಸಾಲಿನಲ್ಲಿ ಅಂದರೆ ದಿನಾಂಕ: 01.04.2009 ರಿಂದ 28.02.2010 ರವರೆಗೆ ರೂ.3099.40 ಕೋಟಿಗಳಷ್ಟು ಕೃಷಿ ಸಾಲ ವಿತರಿಸಲಾಗಿದೆ.

ಇ) ಕರ್ನಾಟಕ ಸರ್ಕಾರ ಹೊರಡಿಸಿರುವ ಅಧಿಸೂಚನೆ ಸಂಖ್ಯೆ: ಕಂ.ಇ.ಮುನೋಮ. 2002 (1) ದಿ: 3/4/–5–05ರಲ್ಲಿ ನೀಡಿರುವ ಆದೇಶದ ಮೇರೆಗೆ ಕೃಷಿ ಉದ್ದೇಶದ ಪರಿಭಾಷೆಯಲ್ಲಿ ಬರುವ ಎಲ್ಲಾ ಚಟುವಟಿಕೆಗಳಿಗೆ ನೀಡುವ ಸಾಲಗಳ ಬಗ್ಗೆ ಬರೆದುಕೊಡುವ ದಸ್ತಾವೇಜುಗಳಿಗೆ ಪೂರ್ಣ ಮುದ್ರಾಂಕ ಶುಲ್ಕ ವಿನಾಯಿತಿ ಮತ್ತು ನೋಂದಣಿ ಶುಲ್ಕ ವಿನಾಯಿತಿ ನೀಡಿ

ಆದೇಶ ಹೊರಡಿಸಿದೆ. ಗ್ರಾಮೀಣ ಗೃಹ ನಿರ್ಮಾಣ ಹಾಗೂ ಕೃಷಿಯೇತರ ಚಟುವಟಿಕೆಗಳ ದೀರ್ಘಾವಧಿ ಸಾಲಕ್ಕೆ ಶೇಕಡ 0.05 ರಷ್ಟು ಸ್ಟಾಂಪ್ ಶುಲ್ಕ ಭರಿಸಬೇಕಾಗಿರುತ್ತದೆ.

ಈ) ಮೇಲಿನಂತೆ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕದಲ್ಲಿ ವಿನಾಯಿತಿ ನೀಡಿರುವುದರಿಂದ ಈ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ರಾಷ್ಟ್ರೀಯ ಹೆದ್ದಾರಿ 48ರ ರಸ್ತೆ ಅಗಲೀಕರಣ

546 (105) ಶ್ರೀರಾಮಸ್ವಾಮಿಗೌಡ ಬಿ.ಬಿ. (ಕುಣಿಗಲ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಣಿಗಲ್ ಪಟ್ಟಣದಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ–48 ರಸ್ತೆಯನ್ನು ಪಟ್ಟಣ ಭಾಗದಲ್ಲಿ ಅಗಲೀಕರಣ ಮಾಡುವುದಕ್ಕಾಗಿ ಇಕ್ಕೇಲಗಳಲ್ಲಿ ಅಂಗಡಿ : ಕಟ್ಟಡಗಳನ್ನು ಸ್ಥಳೀಯ ಜಿಲ್ಲಾಡಳಿತ ತೆರವುಗೊಳಿಸಿ, ನೆಲಸಮ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ತೆರವುಗೊಳಿಸಿರುವ ರಸ್ತೆಯ ಇಕ್ಕೇಲಗಳಲ್ಲಿ ಡಾಂಬರೀಕರಣವಿಲ್ಲದ ಕಾರಣ ವಾಹನ ಸಂಚಾರಕ್ಕೆ ನಗರದ ನಿವಾಸಿಗಳಿಗೆ ಪ್ರತಿನಿತ್ಯ ತೊಂದರೆಯಾಗುತ್ತಿಲ್ಲವೆ;

ಇ) ರಾಷ್ಟ್ರೀಯ ರಸ್ತೆ ಅಭಿವೃದ್ಧಿ ಪ್ರಾಧಿಕಾರ ಅಥವಾ ರಾಜ್ಯ ಸರ್ಕಾರದ ಲೋಕೋಪಯೋಗಿ ಅಥವಾ ಇತರೆ ಇಲಾಖೆಯ ಅನುದಾನಗಳ ಮುಖೇನ ಅಗಲೀಕರಣ ಹಾಗೂ ಡಾಂಬರೀಕರಣದ ಕಾಮಗಾರಿಗಳನ್ನು ಜರೂರಾಗಿ ಮಾಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ಉದ್ಭವಿಸುವುದಿಲ್ಲ.

ಇ) ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಬೈಪಾಸ್ ರಸ್ತೆಯನ್ನು ನಿರ್ಮಾಣ ಮಾಡುತ್ತಿರುವುದರಿಂದ ಕುಣಿಗಲ್ ಪಟ್ಟಣದಲ್ಲಿ ಹಾದುಹೋಗುವ ರಸ್ತೆಯ ಅಗಲೀಕರಣ ಮತ್ತು ಡಾಂಬರೀಕರಣ ಮಾಡುವ ಬಗ್ಗೆ ಯಾವುದೇ ಪ್ರಸ್ತಾವನೆಯು ಲೋಕೋಪಯೋಗಿ ಇಲಾಖೆ ಹಾಗೂ ರಾಷ್ಟ್ರೀಯ ಹೆದ್ದಾರಿ ವಲಯದಿಂದ ಇರುವುದಿಲ್ಲ.